ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 20–09–2018**

# ಪತ್ರಿಕಾ ಆಮಂತ್ರಣ

1.ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತದ
2017–18ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಭೆ:

**ಅಧ್ಯಕ್ಷತೆ:**
ಡಿ.ಕೆ. ಕಾಂತರಾಜು, ಅಧ್ಯಕ್ಷರು. ರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ

ದಿನಾಂಕ: 22–09–2018 ಶನಿವಾರ, ಸಮಯ: ಪೂರ್ವಾಹ್ನ 11.30 ಗಂಟೆಗೆ
ಸ್ಥಳ: ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಲದ ಕಚೇರಿ ಆವರಣ, ನಂ 52,
ಕ್ವೀನ್ಸ್ ರಸ್ತೆ,. ದಂಡು ಪಶು ಆಸ್ಪತ್ರೆ ಆವರಣ, ಬೆಂಗಳೂರು – 560 052.

2.ರಾಜ್ಯ ಮಟ್ಟದ ಭೂ ಸಂಪನ್ಮೂಲ ಮಾಹಿತಿ ಪಾಲುದಾರರ (LRI Stakeholders)
ಕಾರ್ಯಗಾರ:

ವಿಷಯ: ಕೃಷಿ/ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ

ದಿನಾಂಕ: 22–09–2018 ಶನಿವಾರ, ಸಮಯ: ಅಪರಾಹ್ನ : 12.45 ಗಂಟೆಗೆ.
ಸ್ಥಳ: ಸೆನೆಟ್ ಹಾಲ್, ದಿ ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ಬೆಂಗಳೂರು–560 001.

3. ಪತ್ರಿಕಾಗೋಷ್ಠಿ:

ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದಂತೆ:
ಸುಶೀಲ್ ಕುಮಾರ್ ಮೋದಿ, ಉಪ ಮುಖ್ಯಮಂತ್ರಿಗಳು, ಬಿಹಾರ

ದಿನಾಂಕ: 22–09–2018 ಶನಿವಾರ, ಸಮಯ: ಅಪರಾಹ್ನ : 2.15 ಗಂಟೆಗೆ.
ಸ್ಥಳ: ITC Windsor' Hotel West Minister Banquet Hall, Bengaluru.

**ಸಂಖ್ಯೆ:1013/1113**

# ಬೆಂಗಳೂರು–ತಂಜಾವೂರು ಮತ್ತು ಬೆಂಗಳೂರು–ಕೊಯಮತ್ತೂರು ಮಾರ್ಗದಲ್ಲಿ ನಾನ್.ಎಸಿ. ಸ್ಲೀಪರ್ ಬಸ್ ಸಂಚಾರ

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸೆಪ್ಟೆಂಬರ್ 24 ರಿಂದ ಬೆಂಗಳೂರು–ತಂಜಾವೂರು ಮತ್ತು ಬೆಂಗಳೂರು–ಕೊಯಮತ್ತೂರು ಮಾರ್ಗದಲ್ಲಿ ಹೊಸದಾಗಿ ನಾನ್.ಎಸಿ.ಸ್ಲೀಪರ್ ಹೊಸ ಬಸ್ ಸಂಚರಿಸಿಲಿದೆ.

ಬೆಂಗಳೂರಿನಿಂದ ಕೊಯಮುತ್ತೂರಿಗೆ ಪ್ರಯಾಣ ದರವು ರೂ 580/– ಆಗಿದ್ದು, ಬೆಂಗಳೂರಿನಿಂದ ಪ್ರತಿನಿತ್ಯ ರಾತ್ರಿ 9.30 ಗಂಟೆಗೆ ಹೊರಟು ಬೆಳಿಗ್ಗೆ 6.30 ಕ್ಕೆ ಕೊಯಮೂತ್ತೂರು ತಲುಪಲಿದೆ. ಇದೇ ರೀತಿ ಕೊಯಮುತ್ತೂರಿನಿಂದ ಪ್ರತಿನಿತ್ಯ ರಾತ್ರಿ 22.15 ಕ್ಕೆ ಹೊರಟು ಮರುದಿನ ಬೆಳಿಗ್ಗೆ 6.30 ಗಂಟೆ ಬೆಂಗಳೂರು ತಲುಪಲಿದೆ. ಸಾರ್ವಜನಿಕರು ಈ ಎರಡು ನಗರಗಳಿಗೆ ಪ್ರಾರಂಭವಾಗಿರುವ ಸಾರಿಗೆ ವ್ಯವಸ್ಥೆಯ ಸೌಲಭ್ಯ ಪಡೆಯಬಹುದಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದೆ.

**ಸಂಖ್ಯೆ:1014/1114**

## ಎ.ಸಿ.ಬಿ. ದಾಳಿ

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಮೈಸೂರಿನ ಗಾಂಧಿನಗರ ನಿವಾಸಿಯಾದ ಫಿರ್ಯಾದಿದಾರರು ಅವರ ಪರಿಚಿತರಾದ ಶ್ರೀಮತಿ ಲಕ್ಷ್ಮೀಬಾಯಿ ಎಂಬುವರಿಗೆ ಅವರ ಪತಿಯಿಂದ ದಾನವಾಗಿ ಬಂದಿದ್ದ ಮೈಸೂರು ನಗರದ ರಾಜೀವ್ ನಗರ, 1 ನೇ ಹಂತದಲ್ಲಿರುವ ಮನೆಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಮಾಡಿಸಿಕೊಡುವ ಸಂಬಂಧ ಸದರಿಯವರ ಪರವಾಗಿ ವಲಯ ಕಛೇರಿ–8, ಮೈಸೂರು ಮಹಾನಗರ ಪಾಲಿಕೆ, ಉದಯಗಿರಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ.ಪಿ.ಕುಮಾರಸ್ವಾಮಿ, ಕಂದಾಯ ಅಧಿಕಾರಿ, ವಲಯ ಕಛೇರಿ–8, ಮೈಸೂರು ಮಹಾನಗರ ಪಾಲಿಕೆ, ಉದಯಗಿರಿ ಮೈಸೂರು ರವರು ಖಾತೆ ಬದಲಾವಣೆ ಮಾಡಿಕೊಡಲು ರೂ 2,500/– ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕಃ 19–09–2018 ರಂದು ಶ್ರೀ.ಪಿ.ಕುಮಾರಸ್ವಾಮಿ, ಕಂದಾಯ ಅಧಿಕಾರಿ ರವರು ಫಿರ್ಯಾದಿಯವರಿಂದ ಲಂಚದ ಹಣ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಮೈಸೂರು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿದ್ದು, ಇವರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1015/1115**

## A.C.B. Raid

## Bengaluru, Sept 20 (Karnataka Information)

A resident of Gandhinagar, Mysuru had sought for transfer of Khata at Zone Office-8, Mysuru City Corporation, Udayagiri, Mysuru. Sri.P.Kumaraswamy, Revenue officer, Zone Office-8, Mysuru City Corporation, Udayagiri, Mysuru had demanded Rs 2,500/- bribe to do the same.

On 19/09/2018 the officials of Mysuru Anti Corruption Bureau PS trapped Sri.P.Kumaraswamy, Revenue officer while accepting bribe amount of Rs. 2,000/- from the complainant. The bribe amount has been seized. The Case is under Investigation says official press release.

**ಸಂಖ್ಯೆ:1016/1116**

**<u>ಎ.ಸಿ.ಬಿ. ದಾಳಿ</u>**

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕು, ಕಕ್ಕೇರಾ ಗ್ರಾಮದ ನಿವಾಸಿಯು ತಮ್ಮ ಅಕ್ಕನ ಜಮೀನಿನಲ್ಲಿರುವ ಕೊಳವೆ ಬಾವಿಯ ಮೋಟರಗೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಹುಣಸಿಗಿ ಗ್ರಾಮೀಣ ಭಾಗದ ಜೆಸ್ಕಾಂ ಸೆಕ್ಷನ ಅಧಿಕಾರಿಯಾದ ಶ್ರೀ.ಅಮರೇಶ ರವರು ವಿದ್ಯುತ ಸಂಪರ್ಕ ಕಲ್ಪಿಸಿಕೊಡಲು ರೂ.2,000/–ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ: 19/09/2018 ರಂದು ಶ್ರೀ ಅಮರೇಶ ರವರು ಫಿರ್ಯಾದಿದಾರರಿಂದ ರೂ.2000/– ಲಂಚದ ಹಣ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಯಾದಗಿರಿ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1017/1117**

## A.C.B. Raid

## Bengaluru, Sept 20 (Karnataka Information)

A resident of Kakkera Village in Yadgir District had sought for Power supply to motor pump dug in his sister's Agriculture Land. Sri.Amresh, Section officer, Hunasigi rural, Gescom had demanded Rs.2,000/- bribe to Sanction the power supply.

On 19/09/2018, the officials of ACB Yadgir PS have trapped Sri. Amresh, Section Officer while accepting bribe amount Rs.2,000/- from the complainant. The bribe amount has been seized. The Investigation continues says official press release.

**ಎ.ಸಿ.ಬಿ. ದಾಳಿ**

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಹಾವೇರಿ ಜಿಲ್ಲೆ, ಸವಣೂರು ತಾಲ್ಲೂಕು, ದೊಂಬರ ಮತ್ತೂರು ಗ್ರಾಮದ ವಾಸಿಯಾದ ಫಿರ್ಯಾದುದಾರರು ತಮ್ಮ ಜಮೀನಿನ ಅರ್‌ಟಿಸಿನಲ್ಲಿ ಎ.ಸಿ. ನ್ಯಾಯಾಲಯ ಆದೇಶದಂತೆ ಹೆಸರು ಸೇರ್ಪಡೆ ಮಾಡಿಕೊಡಲು ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ.ಷರೀಫ್‌ಸಾಬ್ ರಾಜೇಸಾಬ್ ಪಾಪಣ್ಣನವರ್ ಗ್ರಾಮ ಲೆಕ್ಕಾಧಿಕಾರಿ/ಗಣಕಯಂತ್ರ ನಿರ್ವಾಹಕರು, ಭೂಮಿ ಕೇಂದ್ರ ತಾಲ್ಲೂಕು ಕಛೇರಿ ಸವಣೂರು ಇವರು ಅರ್ಜಿದಾರರ ಜಮೀನಿಗೆ ಸಂಬಂಧಿಸಿದ ಆರ್‌ಟಿಸಿಯಲ್ಲಿ ಹೆಸರು ಸೇರ್ಪಡೆ ಮಾಡಲು ರೂ.1,500/–ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:20–09–2018 ರಂದು ಶ್ರೀ.ಷರೀಫ್‌ಸಾಬ್ ರಾಜೇಸಾಬ್ ಪಾಪಣ್ಣನವರ್ ರವರು ದೂರುದಾರರಿಂದ ರೂ.1,500/– ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಹಾವೇರಿ ಭ್ರಷ್ಟಾಚಾರ ನಿಗ್ರಹ ದಳ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## A.C.B. Raid

**Bengaluru, Sept 20 (Karnataka Information)**

A resident of Dombarmattur Village, Haveri district had applied for entering his name in RTC as per A.C. Court Order. Sri.Sharifsab Rajesab Papannanavar, Village Accountant/Computer operator, Bhoomi kendra Taluk Office, Savanur, Haveri district had demanded a bribe of RS.1,500/- to do the same.

On 20-09-2018 the Officials of ACB Haveri District have trapped and arrested Sri.Sharifsab Rajesab Papannanavar while accepting the bribe amount of Rs.1,500/- from the complainant. The bribe amount has been seized. The case is under Investigation.

**ಸಂಖ್ಯೆ:1018/1118**

## ಸಚಿವರ ಪ್ರವಾಸ

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರೂ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಆದ ಶ್ರೀ ರಾಜಶೇಖರ್ ಬಿ. ಪಾಟೀಲ ಅವರು ಸೆಪ್ಟೆಂಬರ್ 21 ಮತ್ತು 22 ರಂದು ರಾಯಚೂರು, ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳಲ್ಲಿನ ವಿವಿಧ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಸೆಪ್ಟೆಂಬರ್ 22 ರಂದೇ ನಗರಕ್ಕೆ ಹಿಂತಿರುಗಲಿದ್ದಾರೆ.

**ಸಂಖ್ಯೆ:1019/1119**

## ಪ್ರಮಾಣ ವಚನ ಸ್ವೀಕಾರ

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

**ಬಿಜಾಪುರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆದ ಉಪ ಚುನಾವಣೆಯಲ್ಲಿ ಚುನಾಯಿತರಾಗಿರುವ ಸುನೀಲಗೌಡ ಬಸವನಗೌಡ ಪಾಟೀಲ್ ಅವರು ಇಂದು ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಭಗವಂತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.**

**ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರುಗಳಾದ ಎಸ್.ಆರ್. ಪಾಟೀಲ್, ಎಂ.ಬಿ. ಪಾಟೀಲ್, ವಿಧಾನ ಪರಿಷತ್ತಿನ ಕಾರ್ಯದರ್ಶಿ ಮಹಾಲಕ್ಷಮ್ಮ ಸೇರಿದಂತೆ ಚುನಾಯಿತ ಸದಸ್ಯರು ಉಪಸ್ಥಿತರಿದ್ದರು.**

**<u>ಎ.ಸಿ.ಬಿ. ದಾಳಿ</u>**

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಬಾಗಲಕೋಟ ನಿವಾಸಿಯಾಗಿರುವ ಫಿರ್ಯಾದುದಾರರು ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾದ ನಿವೇಶನವನ್ನು ಮಾರಾಟ ಮಾಡುವ ಸಂಬಂಧ ಎನ್‌ಓಸಿ ಪ್ರಮಾಣ ಪತ್ರ ಕೋರಿ ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀಮತಿ ಕವಿತಾ ಜ್ಯೋತಿಬಾ ಬೇವಿನಗಿಡದ, ದ್ವಿ.ದ.ಸ. ಪುನರ್ವಸತಿ ಅಧಿಕಾರಿಗಳ ಕಚೇರಿ ಹಾಗೂ ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟ ರವರು ಫಿರ್ಯಾದುದಾರರ ನಿವೇಶನ ಮಾರಾಟ ಮಾಡಲು ಎನ್‌ಓಸಿ ಪ್ರಮಾಣ ಪತ್ರ ನೀಡಲು ರೂ.5,000/–ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:20/09/2018 ರಂದು ಶ್ರೀಮತಿ.ಕವಿತಾ ಜ್ಯೋತಿಬಾ ಬೇವಿನಗಿಡದ ರವರು ಫಿರ್ಯಾದುದಾರಿಂದ ರೂ.5,000/–ಲಂಚದ ಹಣ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಬಾಗಲಕೋಟ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## A.C.B. Raid

## Bengaluru, Sept 20 (Karnataka Information)

A resident of Bagalkot had sought for an NOC to sell a plot, which was allotted to him by the Bagalkot Town Development Authority. Smt.Kavita Jyotiba Bevinagidad, SDA, Rehabilitation & Bagalkot Town Development Authority, Bagalkot had demanded a bribe amount of Rs.5,000/- from the complainant to issue the same.

On 20/09/2018 the Officials of ACB PS Bagalkot have trapped Smt.Kavita Jyotiba Bevinagidad while receiving bribe amount of Rs.5,000/- from the complainant. The accused has been arrested, and the bribe amount is recovered. Investigation is continued says official press release.

# **ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ**

ಬೆಂಗಳೂರು, ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 22-06-2017 ರ ಅಧಿಸೂಚನೆಯಲ್ಲಿ ಅಧಿಸೂಚಿಸಿದ್ದ ಜಲಸಂಪನ್ಮೂಲ ಇಲಾಖೆಯ ಕಿರಿಯ ಅಭಿಯಂತರರ (ಮೆಕ್ಯಾನಿಕಲ್) ಹುದ್ದೆಗಳಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ: 20-9-2018 ರಂದು ಆಯೋಗದ ವೆಬ್‌ಸೈಟ್ http://kpsc.kar.nic.in/Selection Lists ನಲ್ಲಿ ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು ದಿನಾಂಕ: 26-9-2018 ರೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು ಇದರಿಗೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.